**CW :3**

PW :3

**1**ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.406/2023

| | | |
|---|---|---|
| ಸಾಕ್ಷಿದಾರರ ಹೆಸರು | : | ಡಾ. ಜಂಬೂರು ಚಿದಂಬರ ಅಡಿಗ |
| ತಂದೆಯ ಹೆಸರು | : | ಜಂಬೂರು ಶಂಕರನಾರಾಯಣ ಅಡಿಗ |
| ಪ್ರಾಯ | : | 72 ವರ್ಷ |
| ಉದ್ಯೋಗ | | Consultant Physician and Cardiologist, Chethana Hospital |
| ವಾಸಸ್ಥಳ | : | ಬೊಳುವಾರು , ಪುತ್ತೂರು |

ದಿನಾಂಕ: **04.06.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆ: ಮಾನ್ಯ ಶ್ರೀ ಡಿ ಕೆ ವಕೀಲರಿಂದ: ಫಿರ್ಯಾದಿ ಪರ:

ನಾನು 1996 ರಿಂದ ಪ್ರಸ್ತುತವೂ ಸಹ ಪುತ್ತೂರಿನ ಚೇತನ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದೇನೆ.

ದಿ.04-10-2015 ರಂದು ಆಲಿ ಕೆಎ, ಆರ್ಲಪದವು ವಾಸಿ ಬೆ.10.00 ಗಂಟೆ ಸಮಯದಲ್ಲಿ ಹಲ್ಲೆಯ ಹಿನ್ನಲೆಯಲ್ಲಿ ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಬಂದಿದ್ದರು. ಅವರು ನೀಡಿದ ಮಾಹಿತಿಯಂತೆ ಆಲಿಯವರಿಗೆ ರಜಾಕ್, ಇಸುಬು, ಅಬ್ದುಲ್ ಅಜೀಜ್ ಹಾಗೂ ಇತರರು ಬೋಳಿಂಬಳದ ತನ್ನ ಫಾರಮ್ ಹೌಸ್ ಹತ್ತಿರ ಮರದ ಕೋಲಿನಿಂದ ತನಗೆ ಹಲ್ಲೆ ಆಗಿದೆ ಎಂದು ತಿಳಿಸಿದರು. ನಾನು ಅವರನ್ನು ಪರೀಕ್ಷಿಸಿದಾಗ ಆಲಿಯವರಿಗೆ ತಲೆಯಲ್ಲಿ ನೋವು, ಎಡಕೈ ಹಾಗೂ ಬಲಗೈನಲ್ಲಿ ನೋವು ಕಾಣಿಸಿಕೊಂಡಿತ್ತು. ಆ ಜಾಗವನ್ನು ನಾನು ಒತ್ತಿದಾಗ ಆಲಿಯವರಿಗೆ ನೋವು ಆಗಿರುವುದು ಕಂಡುಬಂತು. ಆಲಿಯವರ ದೇಹದ ಹೊರಭಾಗದಲ್ಲಿ ಎಲ್ಲಿಯೂ ಕೂಡಾ ಗಾಯಗಳು ಆಗಿದ್ದ ಚಿನ್ಹೆ ಕಂಡುಬಂದಿರುವುದಿಲ್ಲ. ಆಲಿಯವರು ನಮ್ಮ ಆಸ್ಪತ್ರೆಯಲ್ಲಿ ದಿ.4-10-2015 ರಿಂದ ದಿ.8-10-15 ರ ವರೆಗೆ ಒಳರೋಗಿಯಾಗಿ ದಾಖಲಾಗಿ ತಮಗೆ ಆದ ಗಾಯಗಳಿಗೆ ಚಿಕಿತ್ಸೆ ಪಡೆದಿದ್ದಾರೆ.

ಆಲಿಯವರು ಚಿಕಿತ್ಸೆ ಪಡೆಯುವಾಗ ಅವರ ಕೈಗಳ ಎಕ್ಸರೇ ಹಾಗೂ ತಲೆಯ ಭಾಗದ ಸಿಟಿ ಸ್ಕ್ಯಾನ್ ತೆಗೆಸಿ ಅವುಗಳನ್ನು ಪರಿಶೀಲಿಸಿದಾಗ ಆಲಿಯವರಿಗೆ ಆಂತರಿಕವಾಗಿ ಯಾವುದೇ ತೊಂದರೆ ಇರುವುದು ಕಂಡು

ಬಂದಿಲ್ಲ. ಒಬ್ಬ ವ್ಯಕ್ತಿಗೆ ದೊಣ್ಣೆಯಿಂದ ಹಲ್ಲೆ ಮಾಡಿ ಕಾಲಿನಿಂದ ತುಳಿದರೆ ನಾನು ಮೇಲೆ ಹೇಳಿದಂತಹ ಗಾಯಗಳು ಆಗುವ ಸಾಧ್ಯತೆಗಳು ಇರುತ್ತವೆ.

1. ನಾನು ಆಲಿಯವರನ್ನು ಪರೀಕ್ಷಿಸಿ ಚಿಕಿತ್ಸೆ ನೀಡಿದ ಸಂಬಂಧ ಗಾಯದ ಪ್ರ ಪತ್ರವನ್ನು ನೀಡಿರುತ್ತೇನೆ.

ಸಾಕ್ಷಿಯು ಗಾಯದ ಪ್ರ ಪತ್ರವನ್ನು ಹಾಗೂ ಅದರಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಗಾಯದ ಪ್ರ ಪತ್ರವನ್ನು ನಿಪಿ-5 ಎಂದು ಹಾಗೂ ಸಾಕ್ಷಿಯ ಸಹಿಯನ್ನು 5 ಎ ಎಂದು ಗುರುತಿಸಲಾಯಿತು. ನಾನು ಚಿಕಿತ್ಸೆ ನೀಡಿದ್ದ ಆಲಿಯವರನ್ನು ನೋಡಿದರೆ ಗುರುತಿಸಬಲ್ಲೆ. ಅವರು ಈ ದಿನ ನ್ಯಾಯಾಲಯದಲ್ಲಿ ಹಾಜರಿದ್ದಾರೆ.

ನನ್ನ ಅಬಿಪ್ರಾಯದಂತೆ ಆಲಿಯವರಿಗೆ ಆಗಿದ್ದ ಗಾಯಗಳು ಸಾಮಾನ್ಯ ಸ್ವರೂಪದ್ದು.

ಪಾಟೀ ಸವಾಲುಃ **1, 3** ಮತ್ತು **4** ನೇ ಆರೋಪಿತರ ಪರ ಶ್ರೀ ಎಮ್ ಎಸ್ ಕೆ ವಕೀಲರಿಂದಃ

ಆಲಿಯವರು ನನಗೆ ಸುಮಾರು 15 ವರ್ಷಗಳಿಂದ ಪರಿಚಯ ಇರುತ್ತಾರೆ. ನಿಪಿ-5 ರಲ್ಲಿ ಎಷ್ಟು ಗಂಟೆಗೆ ಫಿರ್ಯಾದಿಯ ಮೇಲೆ ಹಲ್ಲೆ ಆಗಿದೆ ಎನ್ನುವ ಬಗ್ಗೆ ನಮೂದು ಮಾಡಿಲ್ಲ. ಫಿರ್ಯಾದಿಗೆ ಸಂಬಂಧಿಸಿದ ಕೇಸ್ ಶೀಟ್ ಈಗ ಲಭ್ಯ ಇಲ್ಲ. ಡಿಸ್ಚಾರ್ಜ್ ಸಮ್ಮರಿ ಲಭ್ಯ ಇರುತ್ತದೆ. ಫಿರ್ಯಾದಿಯ ದೇಹದ ಹೊರಭಾಗದಲ್ಲಿ ಯಾವುದೇ ಗಾಯಗಳು ಆಗಿದ್ದು ಕಂಡುಬಾರದ ಕಾರಣ ಆ ಗಾಯದ ವಯಸ್ಸನ್ನು ನಮೂದಿಸಿಲ್ಲ. ಆಲಿಯವರು ತನಗೆ ನೋವು ಇದೆ ಎದದು ಹೇಳಿದ ಕಾರಣ ಹಾಗೂ ಅವರಿಗೆ ಹೃದಯ ಸಂಬಂಧಿ ಖಾಯಿಲೆಗಳು ಕೂಡಾ ಇದ್ದ ಕಾರಣ ಅವರನ್ನು 4 ದಿನಗಳ ಕಾಲ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲು ಮಾಡಿಕೊಂಡು ಚಿಕಿತ್ಸೆ ನೀಡಿದ್ದೇನೆ. ಫಿರ್ಯಾದಿ ನನಗೆ ಮೊದಲಿನಿಂದ ಪರಿಚಯ ಇದ್ದ ಕಾರಣ ಅವರು ನ್ಯಾಯಾಲಯಕ್ಕೆ ನೀಡಿರುವ ಸುಳ್ಳು ಕೇಸಿಗೆ ಪೂರಕವಾಗಿ ಸುಳ್ಳು ಗಾಯದ ಪ್ರ ಪತ್ರವನ್ನು ನೀಡಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಫಿರ್ಯಾದಿಗೆ ಯಾವುದೇ ಗಾಯಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ **2** ಮತ್ತು **5** ರವರ ಪರಃ

ಗಾಯ ಪ್ರ ಪತ್ರದಲ್ಲಿ ನಮೂದಿಸಿರುವ ಮರದ ಕೋಲನ್ನು ಫಿರ್ಯಾದಿ ನನಗೆ ತೋರಿಸಿಲ್ಲ. ಈ ಕೇಸಿನ ಸಲುವಾಗಿ ನಿಪಿ-5 ದಾಖಲೆಯನ್ನು ಸೃಷ್ಟಿಸಿ ಹಾಜರುಪಡಿಸಲಾಗಿದೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

1 ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.